# ಪಠ್ಯದಲ್ಲಿ ಸೈಬರ್ ಕಾನೂನಿಗೆ ಆಗ್ರಹ

**ಬೆಂಗಳೂರು:** ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ಕ್ರೈಂ ತಡೆಯಲು ಪ್ರೌಢ ಶಿಕ್ಷಣ ಪಠ್ಯ ಕ್ರಮದಲ್ಲಿ ಸೈಬರ್ ಕಾನೂನು ವಿಷಯವನ್ನು ಆಳವಡಿಸಬೇಕು ಎಂದು ಡಿಜಿಟಲ್ ಸೊಸೈಟಿ ಆಫ್ ಇಂಡಿಯಾ ಸಂಸ್ಥೆ ಸರ್ಕಾರವನ್ನು ಆಗ್ರಹಿಸಿದೆ. ಕರ್ನಾಟಕ ಕಾನೂನು ಮತ್ತು ಸಂಸದೀಯ



ಸುಧಾರಣಾ ಸಂಸ್ಥೆ, ಗಣಕ ಸಮಾಜ ಪ್ರತಿಷ್ಠಾನ, ಹಾಗೂ ಕೆಎಲ್ಇ ಸೊಸೈಟಿಯ ಕಾನೂನು ಕಾಲೇಜುಗಳು ಶುಕ್ರವಾರ ಕೆಎಲ್ಇ ಕಾನೂನು ಕಾಲೇಜಿನಲ್ಲಿ 'ಗಣಕ ಸಮಾಜದಲ್ಲಿ ವೈಯಕ್ತಿಕ ಮಾಹಿತಿ ಹಕ್ಕು ಮತ್ತು ಮಾಹಿತಿ ರಕ್ಷಣೆ' ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಈ ಒತ್ತಾಯ ಮಾಡಲಾಯಿತು.

ಕರ್ನಾಟಕವನ್ನು ಸೈಬರ್ ಕಾನೂನು ಮತ್ತು ಮಾಹಿತಿ ರಕ್ಷಣೆಯ ವಿಷಯದಲ್ಲಿ ದೇಶದ ಮಾದರಿ ರಾಜ್ಯವನ್ನಾಗಿಸಬೇಕಾದರೆ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ಹಿಡಿದು ಎಂಜಿನಿಯರ್ ವಿದ್ಯಾರ್ಥಿಗಳಿಗೆ ಹಾಗೂ ಐಟಿ, ಬಿಟಿ ಸಂಸ್ಥೆಗಳ ಉದ್ಯೋಗಿಗಳಿಗೆ ಸೈಬರ್ ಕಾನೂನು ಬಗ್ಗೆ ಅರಿವು ಮೂಡಿಸುವುದು ಅಗತ್ಯ ಎಂದು ಡಿಜಿಟಲ್ ಸೊಸೈಟಿ ಆಫ್ ಇಂಡಿಯಾ ಸಂಸ್ಥೆ ಅಧ್ಯಕ್ಷ ನಾ. ವಿಜಯಶಂಕರ್ ಅಭಿಪ್ರಾಯಪಟ್ಟರು.